**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಪ್ಪಳ**

**ಸಿ.ಸಿ. ನಂ. 225/2020**

**ಕೊಪ್ಪಳ ನಗರ ಠಾಣೆ ಃಃ ವಿರುದ್ಧ ಃಃ ಶರಣಪ್ಪ ಗಾಳಿ**

ಆರೋಪಿ ಹೆಸರು ಹೆಸರುಃ-
ಶರಣಪ್ಪ ಗಾಳಿ ತಂದೆ ಹನಮಂತಪ್ಪ ಗಾಳಿ ವಃ 40 ವರ್ಷ, ಉಃ ಲೇಬರ್ ಸಾಃ ಗೌರಿಅಂಗಳ ಕೊಪ್ಪಳ.

**ಃ ದಂ.ಪ್ರ.ಸಂಹಿತೆ ಕಲಂಃ 313 ರಡಿಯಲ್ಲಿ ಆರೋಪಿಯ ಹೇಳಿಕೆ ಃ**

**ಪ್ರಶ್ನೆಃ1ಃ** ನೀವು ನ್ಯಾಯಾಲಯದ ಮುಂದೆ ಸಾಕ್ಷಿದಾರರು ನುಡಿದ ಸಾಕ್ಷಿಗಳನ್ನು ಕೇಳಿದ್ದಿರಾ?

ಆರೋಪಿಯ ಉತ್ತರಃ

**ಪ್ರಶ್ನೆಃ 2 ಃ ಸಿಡಬ್ಲೂ 1/ಪಿಡಬ್ಲೂ-2 ಃ ಪ್ರಭಾಕರ ಭಟ್ಟ ತಂದೆ ಬೀಮಭಟ್ಟ ಜೋಷಿ ಃ ತಹಶೀಲ್ದಾರ ಡಿಸಿ ಆಫೀಸ್ ಧಾರವಾಡಃ ಸಾಃ ಧಾರವಾಡ ಃ** ರವರು ತಮ್ಮ ಸಾಕ್ಷಿಯಲ್ಲಿ ತಾನು 2020 ಕೊಪ್ಪಳ ತಹಶಿಲ್ದಾರ ಆಫೀಸ್ ನಲ್ಲಿ ಶಿರಸ್ತೆದಾರ ಅಂತಾ ಇದ್ದಾಗ ದಿಃ- 25-02-2020 ರಂದು ಮಾನ್ಯ ತಹಶೀಲ್ದಾರ ಕೊಪ್ಪಳರವರು ತನಗೆ ಕಚೇರಿಯ ಆದೇಶ ನೀಡಿ ಸರ್ವೇ ನಂ. 271/1 ಪಹಣಿಗಳನ್ನು ತಹಶೀಲ್ ಕಾರ್ಯಲಯದಿಂದ ನೀಡಿದ್ದು, ಅದರಲ್ಲಿ ನರಸಪ್ಪ ವೆಂಕಪ್ಪ ಎಂದು ಇರುತ್ತದೆ, ಮೂಲ ಪಹಣಿಗಳಲ್ಲಿ ಗಾಳಿ ಎಂದು ಇರುವುದಿಲ್ಲ, ಶ್ರೀ ಶರಣಪ್ಪ ಇರುವುದು ಗಾಳಿ ಎಂದು ತಿದ್ದಿ ತಿದ್ದುಪಡೆ ಮಾಡಿರುತ್ತಾರೆ ಎಂದು ಮಾನ್ಯ ತಹಶೀಲ್ದಾರವರು ಆದೇಶ ಮಾಡಿದ ಪ್ರಯುಕ್ತ, ತಾನು ಆ ಆದೇಶದನ್ವಯ ಶರಣಪ್ಪನ ವಿರುದ್ದ ಕೊಪ್ಪಳ ನಗರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದೇನೆ. ಸದರಿ ದೂರನ್ನು ದಿಃ- 03-04-2020 ರಂದು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ ಃ 3 ಃ** ಮುಂದುವರೆದು ಫಿರ್ಯಾದಿಯೊಂದಿಗೆ ವಕೀಲರ ನೊಟಿಸ, ಪ್ರತ್ಯುತ್ತರ, ಹಳೆ ಪಹಣಿಗಳು ಕೊಟ್ಟಿದ್ದೇನೆ. ನಂತರ ಅದೇ ಪೊಲೀಸರು ಪಂಚನಾಮೆ ಮಾಡಿದರು. ಹಬೀಬ್ ಮತ್ತು ಮಂಜುನಾಥ ಪಂಚರು ಇದ್ದರು. ತಹಶೀಲ್ದಾರ ಆಫೀಸ್ ಕೊಪ್ಪಳದಲ್ಲಿ ಪಂಚನಾಮೆ ಮಾಡಿದರು. ಆರೋಪಿ ಬರೆದ ಅರ್ಜಿ, ತಹಶೀಲ್ದಾರವರ ಆದೇಶ ಪ್ರತಿ, ಲೀಗಲ್ ನೊಟಿಸ ಪ್ರತಿ, ರಿಪ್ಲೆ ಪ್ರತಿ, ಮರು ರಿಪ್ಲೆ ಪ್ರತಿ, ಹಿಂಬರಹ, ಜರಾಕ್ಸ ಪ್ರತಿಗಳು ಇರುತ್ತವೆ, ಇನ್ನೊಬ್ಬರ ಆಸ್ತಿ ವರ್ಗಾವಣೆ ಮಾಡಿಕೊಳ್ಳಬೇಕೆಂದಿದ್ದ ಅದಕ್ಕಾಗಿ ಫಿರ್ಯಾದಿ ಕೊಡಲಾಗಿದೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆಃ 4 ಃ ಸಿಡಬ್ಲೂ 4/ಪಿಡಬ್ಲೂ-1 ಃ ಗವಿಸಿದ್ದಪ್ಪ ತಂದೆ ವೀರನಗೌಡ ಃಸಾಃ ಕೊಪ್ಪಳ ಃ** ರವರು ತಮ್ಮ ಸಾಕ್ಷಿಯಲ್ಲಿ ಕೊಪ್ಪಳ ಜಮೀನು ಸರ್ವೇ ನಂ. 273/ಎ 1 ಕ್ಷೇತ್ರ 4 ಎಕರೆ ಜಮೀನನ್ನು ವಾಸಪ್ಪ ತಂದೆ ರಾಮಪ್ಪ ಕರಮುಡಿ ಇವರ ಕಡೆಯಿಂದ ತಮ್ಮ ತಂದೆ 1993-94 ರಲ್ಲಿ ಖರೀದಿಸಿದ್ದರು. 2004 ರಲ್ಲಿ ನರಸಪ್ಪ ತಂದೆ ವೆಂಕಪ್ಪ ಕರಮುಡಿ ಮಕ್ಕಳು 5 ಗಂಡು 2 ಹೆಣ್ಣು ನಮ್ಮಲ್ಲಿಗೆ ಬಂದು ತಮ್ಮ ಸರ್ವೇ ನಂ.271/1 ಕ್ಷೇತ್ರ 5 ಎಕರೆ ನಿಮ್ಮ ಹೆಸರಿಗೆ ಆಗಿದೆ, ನಿಮ್ಮ ಸರ್ವೇ ನಂಬರ್ ನಮ್ಮ ಹೆಸರಿಗೆ ಆಗಿದೆ ಎಂದರು ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ ಃ 5 ಃ** ಮುಂದುವರೆದು ನಂತರ ತಹಶೀಲ್ದಾರ ಕಚೇರಿಗೆ ಹೋಗಿ ತಮ್ಮ ಸರ್ವೇ ನಂಬರ್ ಅವರಿಗೆ ಬಿಟ್ಟು ಕೊಟ್ಟೆವು ಅವರ ಸರ್ವೇ ನಂಬರ್ ನಮಗೆ ಬಿಟ್ಟುಕೊಟ್ಟರು. ಇವತ್ತಿನವರೆಗೂ ಸರ್ವೇ ನಂ. 271/1 ತಮ್ಮ ತಂದೆ ಹೆಸರಿಗೆ ಇದ್ದು, 273/ಎ 1 ನರಸಪ್ಪನ ಮಕ್ಕಳಿಗೆ ಹೊಯಿತು. 2018 ರಲ್ಲಿ 271/1 ನಮ್ಮ ತಂದೆ ನನ್ನ ಹೆಸರಿಗೆ ದಾನ ಪತ್ರ ಮಾಡಿದರು ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆಃ 6 ಃ** ಮುಂದುವರೆದು 2017 ರಲ್ಲಿ ಶರಣಪ್ಪ ಹನಮಂತಪ್ಪ ಗಾಳಿಯವರು ತಮ್ಮ ವಕೀಲರ ಮೂಲಕ ಒಂದು ನೊಟಿಸ್ ಕೊಟ್ಟರು. ಪಹಣಿ ಪತ್ರಿಕೆಯಲ್ಲಿ ನರಸಪ್ಪ ತಂದೆ ಯಂಕಪ್ಪ ಗಾಳಿ ಅಂತಾ ನೊಟಿಸ್ಸ ಬಂತು. ಅದರಲ್ಲಿ ನರಸಪ್ಪ ತಂದೆ ಯಂಕಪ್ಪ ಗಾಳಿ ಅಂತಾ ನೊಟಿಸ್ ಕೊಟ್ಟರು. ಅದನ್ನು ತೆಗೆದುಕೊಂಡು ತಹಶೀಲ್ದಾರ ಕಚೇರಿಗೆ ಬಂದೆವು. 2017 ರಲ್ಲಿ ವರ್ಗಾವಣೆ ಮಾಡಲು ಶರಣಪ್ಪ ಗಾಳಿ ನೊಟಿಸು ಕೊಟ್ಟಿದ್ದಾರೆ ಎಂದು ನೀವು ದಾಖಲಾತಿ ತೆಗೆದುಕೊಂಡು ಬಾ ಎಂದರು. ನಾವು ದಾಖಲಾತಿ ತೆಗೆದುಕೊಂಡು ಹೋಗಿ ತಹಶೀಲ್ದಾರಗೆ ಕೊಟ್ಟೆವು ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರಃ

**ಪ್ರಶ್ನೆಃ 7 ಃ** ಮುಂದುವರೆದು ಅವರು ತಮ್ಮ ಕಚೇರಿ ದಾಖಲೆ ನಾವು ಹಾಜರು ಮಾಡಿದ ದಾಖಲಾತಿ ಟ್ಯಾಲಿ ಮಾಡಿ, ಈ ಗಾಳಿ ಅಂತಾ ಬಂದಿದ್ದು ಯಾವುದು ಇಲ್ಲ ಅಂದರು, ಅವರು ನೊಟಿಸ್ಸು ಕೊಟ್ಟಿದ್ದಾರೆ ಅಂತಾ ಹೇಳಿದೆ. ಅದನ್ನು ನೋಡಿ ತಹಶಿಲ್ದಾರವರು ಇವರು ಇನ್ನೊಬ್ಬರ ಆಸ್ತಿ ಕಬಳಿಸಲು ಬಂದಿದ್ದಾನೆ ಎಂದರು. ಶರಣಪ್ಪ ಗಾಳಿ ಇವರು ತಮಗೆ ವರ್ಗಾವಣೆ ಮಾಡಿಕೊಡಲು ನೊಟಿಸ ಕೊಟ್ಟಿದ್ದಾರೆ. ಇದಾದ ನಂತರ 2020 ರಲ್ಲಿ ಪೊಲೀಸ್ ಠಾಣೆಯಿಂದ ಕರೆ ಬಂದಿತು. ಶರಣಪ್ಪ ದಾಖಲಾತಿ ತಿದ್ದಿ ಪೊರ್ಜರಿ ಮಾಡಿದ್ದಾನೆ ಪೊಲೀಸರಿಗೆ ತಹಶೀಲ್ದಾರ ದೂರು ಕೊಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು. ಆಗ ಪೊಲೀಸರಿಗೆ ದಾಖಲಾತಿ ತೆಗೆದುಕೊಂಡು ಹೋಗಿ ಕೊಟ್ಟೆವು. ಶಿರಸ್ತೆದಾರರು ಪೊಲೀಸರಿಗೆ ತಮ್ಮ ದಾಖಲೆ ಕೊಟ್ಟರು. ಗಾಳಿ ಅಂತಾ ತಿದ್ದಿ ಕಲರ್ ಪ್ರಿಂಟ್ ಹಾಕಿದ್ದು ಕೊಟ್ಟರು. ಅದಕ್ಕೆ ತಾನು ಇವರು ತಪ್ಪು ಮಾಡಿದ್ದಾರೆ ಮೋಸ ಮಾಡಿದ್ದಾರೆ ಸಾಕ್ಷಿಯಾಗುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರಃ

**ಪ್ರಶ್ನೆಃ 8 ಃ** ಮುಂದುವರೆದು 2020 ರಲ್ಲಿ ಶರಣಪ್ಪ ಇವರು ಎಸಿ ಕಚೇರಿಯಲ್ಲಿ ಪ್ರಕರಣ ದಾಖಲು ಮಾಡಿದ್ದರು. ದಾಖಲಾತಿ ತಿದ್ದುಪಡೆ ಆಗಿದೆ ವಾಪಸ್ಸು ತೆಗೆದುಕೊಳ್ಳುತ್ತೇವೆ ಅಂತಾ ವಕೀಲರ ಮೂಲಕ ತಕರಾರು ಹಾಕಿದರು. ದಾಖಲಾತಿ ನಾನು ತಿದ್ದಿಲ್ಲ ವಕೀರು ತಿದ್ದಿದ್ದಾರೆ ಅಂತಾ ಶರಣಪ್ಪ ಗಾಳಿಯವರು ತಹಶೀಲ್ದಾರಗೆ ನೊಟಿಸ್ಸು ಕೊಟ್ಟಿದ್ದಾರೆ. ಮೂಲ ಪ್ರತಿ ಪೊಲೀಸ ಠಾಣೆಯಲ್ಲಿವೆ. ಕೇಳಿದರೆ ಅವರು ಕೊಡುತ್ತಿಲ್ಲಾ. ಕಾರಣ ಅವರಿಗೆ ಶಿಕ್ಷೆ ಆಗಲು ಕೊರುತ್ತೇನೆ. ಈ ವಿಷಯ

ಪೊಲೀಸರ ಮುಂದೆ ಹೇಳಿದ್ದೇನೆ ಕೊಪ್ಪಳ ಜಮೀನು ಸರ್ವೇ ನಂ 271/1 ಕ್ಷೇತ್ರ 5 ಎಕರೆ ಪೈಕಿ 3 ಗುಂಟೆ ಇದರ 1973-74 ರಿಂದ 2000-2001 ನೇ ಸಾಲಿನ ಪಹಣಿ ಪತ್ರಿಕೆ ತನಿಖಾಧಿಕಾರಿಗೆ ನಾನೇ ಕೊಟ್ಟಿದ್ದೇನೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರಃ

**ಪ್ರಶ್ನೆಃ 9 ಃ ಸಿಡಬ್ಲೂ 5/ಪಿಡಬ್ಲೂ-5 ಃ ವಿಜಯಕುಮಾರ ತಂದೆ ನರಸಪ್ಪ ಃಸಾಃ ಕೊಪ್ಪಳ ಃ** ರವರು ತಮ್ಮ ಸಾಕ್ಷಿಯಲ್ಲಿ ತನ್ನ ತಂದೆ ನರಸಪ್ಪ ತಂದೆ ಯಂಕಪ್ಪ ಕರಮುಡಿ ಇವರ ಹೆಸರಿನಲ್ಲಿ ಕೊಪ್ಪಳದ ಜಮೀನು ಸರ್ವೇ ನಂ. 273/ಎ 1 ಕ್ಷೇತ್ರ 4 ಎಕರೆ, 271/3 ಕ್ಷೇತ್ರ 9 ಎಕರೆ ಪೈಕಿ 5 ಎಕರೆ ಇದ್ದವು. 1987 ರಲ್ಲಿ ತಮ್ಮ ತಂದೆ ಮರಣ ಹೊಂದಿದ್ದಾರೆ. ತಾವು 5 ಗಂಡು 2 ಹೆಣ್ಣು ಮಕ್ಕಳು ಇದ್ದೇವೆ. 1) ಸುಭಾಷ 2) ಶಾಂತಾಬಾಯಿ 3) ಅಶೋಕ 4) ಸುರೇಶ 5) ವಿಜಯಕುಮಾರ 6) ಸುಮಿತ್ರಾಬಾಯಿ 7) ಮದುಸೂದನ್ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರಃ

**ಪ್ರಶ್ನೆಃ 10 ಃ** ಮುಂದುವರೆದು ನಾವು ಹೊಲ ಮಾರಬೇಕು ಎಂದುಕೊಂಡೆವು, ಆದರೆ ಸರ್ವೇ ನಂ. 273/ಎ 1 ಕ್ಷೇತ್ರ 4 ಎಕರೆ, ಇದ್ದದ್ದು ಸರ್ವೇ ನಂ. 271 ಕ್ಷೇತ್ರ 4 ಎಕರೆ ಅಂತಾ 1994 ರಲ್ಲಿ ಬದಲಾಯಿತು. ಸರ್ವೆ ನಂ. 271/3 ಕ್ಷೇತ್ರ 9 ಎಕರೆ ಪೈಕಿ 5 ಎಕರೆ ಇದ್ದದ್ದು ಸರ್ವೇ ನಂ. 273/ಎ 1 ಕ್ಷೇತ್ರ 5 ಎಕರೆ 1994 ರಲ್ಲಿ ಆಗಿತ್ತು. 2004 ರಲ್ಲಿ ಈ ರೀತಿ ಅದಲು ಬದಲು ಆದ ಜಮೀನು ಸರ್ವೇ ನಂಬರ್ ಗಳನ್ನು ಮಾತ್ರ ಬದಲಾಯಿಸಿಕೊಂಡೆವು, ಜಮೀನುಗಳನ್ನು ಇದ್ದದ್ದಂತೆ ಯಥಾಸ್ಥಿತಿಯಲ್ಲಿ ಕಾಯ್ದುಕೊಂಡೆವು ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರಃ

**ಪ್ರಶ್ನೆ : 11 :** ಮುಂದುವರೆದು ಶರಣಪ್ಪ ಹನಮಂತಪ್ಪ ಗಾಳಿ ಸಾಃ ಕೊಪ್ಪಳ ಇವರು 18-09-2017 ರಲ್ಲಿ ಶರಣಪ್ಪ ತಂದೆ ಹನಮಂತಪ್ಪ ಗಾಳಿ ಇವರು ನರಸಪ್ಪ ಯಂಕಪ್ಪ ಕರಮುಡಿ ಇವರಿಗೆ ಯಾವುದೇ ಮಕ್ಕಳು ಇರುವುದಿಲ್ಲ ಎಂದು ಹೇಳಿ ತನ್ನ ಹೆಸರಿಗೆ ಈ 2 ಹೊಲಗಳನ್ನು ದಾಖಲಿಸಬೇಕೆಂದು ಹೇಳಿ ಅರ್ಜಿ ಕೊಟ್ಟರು, ಈ ವಿಷಯ ನಮಗೆ ಗೊತ್ತಾಯಿತು. ಆದರೆ ತಹಶೀಲ್ದಾರವರು ಅವರ ಹೆಸರಿಗೆ ದಾಖಲಿಸಲಿಲ್ಲಾ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರಃ

**ಪ್ರಶ್ನೆಃ 12ಃ** ಮುಂದುವರೆದು2 ಹೊಲಗಳ ಪೈಕಿ 4 ಎಕರೆ ಇದ್ದುದ್ದು ಗುಪ್ತಾ ಎನ್ನುವವರಿಗೆ 2007 ರಲ್ಲಿ ಮಾರಿದ್ದೇವೆ, 5 ಎಕರೆ ಇದ್ದ ಹೊಲವನ್ನು ಈರನಗೌಡರಿಗೆ 1994 ರಲ್ಲಿ ಮಾರಿದ್ದೇವೆ ಅದು ನಮ್ಮ ದೊಡ್ಡಪ್ಪ ರಾಮಪ್ಪನ ಹೊಲ ಈ ಕುರಿತು ಪೊಲೀಸರು ನನ್ನ ಹೇಳಿಕೆಯನ್ನು 2020 ರಲ್ಲಿ ಪಡೆದಿದ್ದಾರೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರಃ

**ಪ್ರಶ್ನೆಃ 13 ಃ ಸಿಡಬ್ಲೂ 6/ಪಿಡಬ್ಲೂ-6 ಃ ಉಷಾ ಗಂಡ ಹರ್ಷವರ್ದನಃ ಗ್ರಾಮಲೆಕ್ಕಾಧಿಕಾರಿ ಎಸಿ ಆಫೀಸ್ ಕೊಪ್ಪಳ ಃಸಾಃ ಕೊಪ್ಪಳ ಃ** ರವರು ತಮ್ಮ ಸಾಕ್ಷಿಯಲ್ಲಿ ಜೂನ್ 2020 ರಲ್ಲಿ ತಾನು ತಹಶಿಲ್ದಾರ ಆಫೀಸ್ ನಲ್ಲಿ ಪಹಣಿ ತಿದ್ದುಪಡೆ ಸೆಕ್ಷನ್ ನಲ್ಲಿ ಕೆಲಸ ಮಾಡುತ್ತಿದ್ದಾಗ, ಅರ್ಜಿದಾರ ಶರಣಪ್ಪ ಗಾಳಿ ಇವರಿಗೆ ಕೊಪ್ಪಳದ ಜಮೀನು ಸರ್ವೇ ನಂ. 271/1 ಕ್ಷೇತ್ರ 5 ಎಕರೆ ಸಂಬಂದಪಟ್ಟಂತೆ ಅದಕ್ಕಿಂತ ಮೊದಲು ಪಹಣಿ ತಿದ್ದು ಪಡೆ ಸಕ್ಷನ್ ನಲ್ಲಿ ಕೆಲಸ ಮಾಡುತ್ತಿದ್ದೆ ಕುಮಾರ ಹಳ್ಳಿಯವರಿಗೆ ಅರ್ಜಿ ಕೊಟ್ಟಿದ್ದ. 5 ಎಕರೆ ಪೈಕಿ 3 ಎಕರೆ ನಮ್ಮ ಹೆಸರಿಗೆ ದಾಖಲಾಗಿದೆ, ಇನ್ನೂ 2 ಎಕರೆ ನರಸಪ್ಪ ತಂದೆ ವೆಂಕಪ್ಪ ಇವರ ಹೆಸರಿಗೆ ಉಳಿದುಕೊಂಡಿದೆ, ಸದರಿ ನರಸಪ್ಪರವರ ಹೆಸರನ್ನು ಕಡಿಮೆ ಮಾಡಿ ಆ 2 ಎಕರೆ ಜಮೀನನ್ನು ಸಹ ನನ್ನ ಹೆಸರಿಗೆ ದಾಖಲಿಸಿ ಕೊಡಿ ಎಂದು ಕೇಳಿ ಅರ್ಜಿ ಕೊಟ್ಟಿದ್ದರು ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರಃ

**ಪ್ರಶ್ನೆ : 14 :** ಮುಂದುವರೆದು ನಿಮ್ಮ ಹೆಸರಿಗೆ ಇರುವ ಸಂಪೂರ್ಣ ಜಮಿಜೇನನ್ನು ನೀವು ಈಗಾಗಲೇ ಮಾರಾಟ ಮಾಡಿದ್ದೀರಿ ನಿಮ್ಮ ಹೆಸರಿಗೆ ಯಾವುದೇ ಜಮೀನು ಉಳಿದಿಲ್ಲ, ಆಕಾರ ಬಂದ್ ಪ್ರಕಾರ ಪಹಣಿಯಲ್ಲಿ ಕಾಣಿಸಿದ ಕ್ಷೇತ್ರ ಸರಿಯಾಗಿ ಇದೆ, ಈ 2 ಎಕರೆ ಜಮೀನನ್ನು ನಿಮ್ಮ ಹೆಸರಿಗೆ ಹಚ್ಚಲು ಬರುವುದಿಲ್ಲ ಎಂದು ಹಿಂಬರಹ ಕೊಟ್ಟಿದ್ದರು ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರ:

**ಪ್ರಶ್ನೆ : 15 :** ಮುಂದುವರೆದು ಜೂನ್ 2020 ರಲ್ಲಿ ಅಧಿಕಾರ ವಹಿಸಿಕೊಂಡೆ, ಅಕ್ಟೊಬರ್ 2020 ರಲ್ಲಿ ಶಂಶು ವಕೀಲರು ತಮ್ಮ ತಹಶೀಲ್ದಾರ ಸಾಹೆಬರಿಗೆ ಒಂದು ನೊಟಿಸ್ಸು ಕೊಟ್ಟಿದ್ದರು. ಅದರಲ್ಲಿ ಸರ್ವೆ ನಂ. 271 ರಲ್ಲಿ ಶರಣಪ್ಪ ಗಾಳಿರವದ್ದು 2 ಎಕರೆ ಜಮೀನು ಉಳಿಯುತ್ತದೆ, ಕೈಬರಹ ಪಹಣಿಯಲ್ಲಿ ಮೂಲ ಮಾಲೀಕ ನರಸಪ್ಪ ತಂದೆ ವೆಂಕಪ್ಪ ಗಾಳಿ ಎಂದು ಇದ್ದು, ಅವರ ಜಮೀನು ಶರಣಪ್ಪ ಗಾಳಿಯವರಿಗೆ ಬರುತ್ತದೆ ಅಂತಾ ಹೇಳಿದ್ದರು. ಅದರೊಂದಿಗೆ ಕೈಬರಹ ಪಹಣಿಯನ್ನು ಲಗತ್ತಿಸಿದ್ದರು ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರ:

**ಪ್ರಶ್ನೆ : 16 :** ಮುಂದುವರೆದು ಶರಣಪ್ಪ ಗಾಳಿ ಇವರು ತಾವು ಕೊಟ್ಟ ಅರ್ಜಿಯೊಂದಿಗೆ ಲಗತ್ತಿಸಿದ ಪಹಣಿ ಪತ್ರಿಕೆಯನ್ನು ತಮ್ಮ ಕಚೇರಿಯಲ್ಲಿ ಇದ್ದ ಮೂಲ ದಾಖಲಾತಿಯೊಂದಿಗೆ ತಾಳೆ ಹಾಕಿ ಸದರಿ ಪಹಣಿ ಪತ್ರಿಕೆ ಪರಿಶೀಲನೆ ಮಾಡಿದಾಗ, ನರಸಪ್ಪ ತಂದೆ ವೆಂಕಪ್ಪ ಮಾತ್ರ ಇದ್ದ ಜಾಗೆಯಲ್ಲಿ ನರಸಪ್ಪ ತಂದೆ ವೆಂಕಪ್ಪ ಗಾಳಿ ಎಂದು ತಿದ್ದುಪಡೆ ಮಾಡಿ, ಕಾಲಂ ನಂ. 9 ಮತ್ತು 12 ರಲ್ಲಿ ತಿದ್ದು ಪಡೆ ಮಾಡಿದ್ದು ಕಂಡು ಬಂತು, ತಹಶೀಲ್ದಾರವರು ಶಂಶು ವಕೀಲರಿಗೆ ನೊಟಿಸ್ಸು ಕೊಟ್ಟು, ನೀವು ಕೊಟ್ಟ ಪಹಣಿ ಪತ್ರಿಕಯಲ್ಲಿ ಹೆಸರಿನೊಂದಿಗೆ ಗಾಳಿ ಎಂಬ ಅಡ್ಡ ಹೆಸರು ಸೇರಿಕೊಂಡಿದೆ, ಈ ಕುರಿತು ಈ ಕಾರ್ಯಾಲಯದಿಂದ ಪಡೆದ ಮೂಲ ಪಹಣಿ ಪತ್ರಿಕೆಯನ್ನು ಹಾಜರುಪಡಿಸಲು ಕೇಳಿದರು ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರ:

**ಪ್ರಶ್ನೆ: 17 :** ಮುಂದುವರೆದು ಆಗ ಶಂಶು ವಕೀಲರು ಲಿಖಿತವಾಗಿ ಮತ್ತೆ ಉತ್ತರ ಕೊಟ್ಟು ನಾನು ನೀಡಿದ ನೊಟಿಸ್ಸು ತಪ್ಪಾಗಿರುತ್ತದೆ, ಸದರಿ ನೊಟಿಸ್ಸು ವಾಪಸ್ಸು ಪಡೆಯುತ್ತೇನೆ, ನಮ್ಮ ಕಕ್ಷಿದಾರ ಕೊಟ್ಟ ದಾಖಲೆಯನ್ನು ನಿಮಗೆ ಸಲ್ಲಿಸಿರುತ್ತೇನೆ, ತಿದ್ದುಪಡೆ ಮಾಡಿ ಗಾಳಿ ಎಂದು ಸೇರಿಸಿದ್ದು ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ಲಿಖಿತವಾಗಿ ಹೇಳಿದರು ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರ:

**ಪ್ರಶ್ನೆ : 18:** ಮುಂದುವರೆದು ಶರಣಪ್ಪ ಗಾಳಿ ಇವರಿಗೆ ತಮ್ಮ ತಹಶೀಲ್ದಾರವರು ನೊಟಿಸ ನೀಡಿ, ಗಾಳಿ ಎಂಬ ಶಬ್ದವನ್ನು ನೀವೆ ಬರೆದಿರುತ್ತೀರಿ ಕೇಳಿದರು, ಆಗ ಶರಣಪ್ಪ ಗಾಳಿಯವರು ಲಿಖಿತವಾಗಿ ಉತ್ತರ ನಿಡಿ ನಾನು ತಹಶೀಲ್ದಾರ ಕಚೇರಿಯಿಂದ ಪಡೆದ ಪಹಣಿ ಪತ್ರಿಕೆಯಲ್ಲಿ ವೆಂಕಪ್ಪ ತಂದೆ ನರಸಪ್ಪ ಎಂದು ಮಾತ್ರ ಇತ್ತು ಅದರ ಪ್ರತಿಯನ್ನು ಮಾತ್ರ ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ, ಅದಕ್ಕೆ ಗಾಳಿ ಎಂಬ ಶಬ್ದ ಸೇರಿಸಿ ಅರ್ಜಿಯೊಂದಿಗೆ ಅದರ ಪ್ರತಿ ಲಗತ್ತಿಸಿಕೊಟ್ಟಿದ್ದು ನನಗೆ ಗೊತ್ತಿಲ್ಲ ಎಂದು ಬರೆದುಕೊಟ್ಟರು ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರ:

**ಪ್ರಶ್ನೆ : 19 :** ಮುಂದುವರೆದು ಆಗ ರೆಕಾರ್ಡ ರೂಮ್ ಶಿರಸ್ತೆದಾರರಾದ ಪ್ರಭಾಕರ ಭಟ್ಟ ರವರು ತಹಶೀಲ್ದಾರವರು ಲಿಖಿತ ನಿರ್ದೇಶನ ನೀಡಿ, ಸರ್ವೆ ನಂ. 271/1 ರ ಪಹಣಿ ಪತ್ರಿಕೆಯಲ್ಲಿ ತಿದ್ದುಪಡೆ ಮಾಡಿದವರ ಕುರಿತು ಶರಣಪ್ಪ ಇವರ ವಿರುದ್ದ ಫಿರ್ಯಾದಿ ಸಲ್ಲಿಸಲು ಹೇಳಿದರು, ಅದರಂತೆ ಪ್ರಭಾಕರ ಭಟ್ಟರವರು ಶರಣಪ್ಪ ಗಾಳಿ ವಿರುದ್ದ ಕೊಪ್ಪಳ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರು ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರ:

**ಪ್ರಶ್ನೆ : 20 :** ಮುಂದುವರೆದು ಈ ಕುರಿತು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಅಬಿಲೇಖಾಲಯದ ಜವಾಬ್ದಾರಿ ನನಗೆ ಇಲ್ಲ, ಅದರಲ್ಲಿ ನಾನು ಕೆಲಸ ಮಾಡುವುದಿಲ್ಲ, ನನಗೆ ಪಹಣಿ ತಿದ್ದುಪಡೆ ಮಾಡುವ ವಿಷಯ ಮಾತ್ರ ನೊಡಿಕೊಳ್ಳುತ್ತೇನೆ. ಆ ವಿಭಾಗ ಮಾತ್ರ ನೊಡಿಕೊಳ್ಳುತ್ತೇನೆ. ಶರಣಪ್ಪ ಗಾಳಿಗೆ ಸಂಬಂದಪಟ್ಟ ಕಡತವನ್ನು ಈಗ ಕೆಲಸ ಮಡುತ್ತಿರುವ

ಮಂಜುನಾಥ ಎನ್ನುವವರಿಗೆ ಕೊಟ್ಟಿದ್ದೇನೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆಃ 21 ಃ ಸಿಡಬ್ಲೂ 7/ಪಿಡಬ್ಲೂ-7 ಃ ಮುದುಕಪ್ಪ ತಂದೆ ಸಿದ್ದಪ್ಪ ಃ ನಿವೃತ್ತ ಎ.ಎಸ್.ಐ ಃಸಾಃ ಕೊಪ್ಪಳ ಃ** ರವರು ತಮ್ಮ ಸಾಕ್ಷಿಯಲ್ಲಿ ತಾನು ಕೊಪ್ಪಳ ನಗರ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಮೇ 2015 ರಿಂದ 2020 ಮೇ ವರೆಗೆ ಕೆಲಸ ಮಾಡುತ್ತಿರುವಾಗ ದಿಃ- 03-04-2020 ರ ಮದ್ಯಾಹ್ನ 1 ಗಂಟೆ ಸುಮಾರಿಗೆ ಪ್ರಭಾಕರ ಭಟ್ಟ ಎಂಬ ಕೊಪ್ಪಳ ತಹಶೀಲ್ದಾರ ಕಚರೀಯಿಂದ ಗಣಿಕೀಕೃತ ಒಂದು ಫಿರ್ಯಾದಿಯನ್ನು ಕೊಟ್ಟರು, ಸದರಿ ಫಿರ್ಯಾದಿಯ ಆಧಾರದ ಮೇಲೆ ನಾನು ಭಾ.ದಂ.ಸಂಹಿತೆ ಕಲಂ 420, 465, 468 ರಡಿ ಅಪರಾಧ ಸಂಖ್ಯೆ 42/2020 ದಾಖಲಿಸಿ ನ್ಯಾಯಾಲಯಕ್ಕೆ ಪ್ರ.ವ.ವರದಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪಶ್ನೆ ಃ 22 ಃ** ಮುಂದುವರೆದು ಫಿರ್ಯಾದಿಯೊಂದಿಗೆ ಕೊಪ್ಪಳದ ಜಮೀನು ಸರ್ವೇ ನಂ. 271/1 ಕ್ಷೇತ್ರ 5 ಎಕರೆ ಗೆ ಸಂಬಂದಪಟ್ಟಂತೆ ನರಸಪ್ಪ ತಂದೆ ವೆಂಕಪ್ಪ ಇವರ ಹೆಸರಿನಲ್ಲಿರುವ 2020 ನೇ ಸಾಲಿನ ಪಹಣಿ ಪತ್ರಿಕೆ ಜರಾಕ್ಸ ಪ್ರತಿ, ಇನ್ನೊಂದು ಅದೇ ಜರಾಕ್ಸ ಪಹಣಿ ಪತ್ರಿಕೆ ಪ್ರತಿ ನರಸಪ್ಪ ತಂದೆ ವೆಂಕಪ್ಪ ಗಾಳಿ, ತಹಶೀಲ್ದಾರ ಕೊಪ್ಪಳ ಇವರು ಫಿರ್ಯಾದಿ ಕೊಡಲು ಹೇಳಿ ಮಾಡಿದ ಆದೇಶದ ಜರಾಕ್ಸ ಪ್ರತಿ, ಒಟ್ಟು 16 ನೊಟಿಸನ ಜರಾಕ್ಸ ಪ್ರತಿಗಳು ಕೊಟ್ಟರು. ವಕೀಲರಿಗೆ ಕೊಟ್ಟ ಪ್ರತ್ಯುತ್ತರ ನೊಟಿಸನ ಪ್ರತಿ ಇವುಗಳನ್ನು ಕೊಟ್ಟಿದ್ದರು. ಮುಂದಿನ ತನಿಖೆಗಾಗಿ ಸದರಿ ಕಡತವನ್ನು ಹೆಚ್ ಸಿ ಖಾಜಾಸಾಬರವರಿಗೆ ವಹಿಸಿಕೊಟ್ಟೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ: 23 ಃ ಸಿಡಬ್ಲೂ 8/ಪಿಡಬ್ಲೂ-8 ಃ ರಾಜಾಸಾಬ ತಂದೆ ದಸ್ತಗಿರಿಸಾಬ ಃ ನಿವೃತ್ತ ಎ.ಎಸ್.ಐ ಃಸಾಃ ಕೊಪ್ಪಳ ಃ** ರವರು ತಮ್ಮ ಸಾಕ್ಷಿಯಲ್ಲಿ 2015 ರಿಂದ 2022 ರವರೆಗೆ ಕೊಪ್ಪಳ ನಗರ ಠಾಣೆಯಲ್ಲಿ ಎ.ಎಸ್.ಐ ಅಂತಾ ಕೆಲಸ ಮಾಡುತ್ತಿರುವಾಗ ಹೆಚ್ ಸಿ 85 ಮುದಕಪ್ಪರವರಿಂದ ಕಡತವನ್ನು ಪಡೆದುಕೊಂಡೆ, ದಿಃ- 03-04-2020 ರಂದು 3 ಗಂಟೆಯಿಂದ 4 ಗಂಟೆಯ ಮದ್ಯದಲ್ಲಿ ತಹಶೀಲ್ ಆಫೀಸ್ ನ ಕಾರ್ಯಾಲಯದಲ್ಲಿ ಮಂಜುನಾಥ ಮತ್ತು ಅಬೀಬ್ ಸಮಕ್ಷಮ ಪಂಚನಾಮೆ ಮಾಡಿದೆ, ಪ್ರಭಾಕರ ಭಟ್ಟರವರು ಸ್ಥಳವನ್ನು ತೋರಿಸಿದರು. ಶರಣಪ್ಪ ತಂದೆ ಹನಮಂತಪ್ಪ ಗಾಳಿ ಪಹಣಿ ತಿದ್ದುಪಡೆ ಮಾಡಬೇಕೆಂದು ಅರ್ಜಿ ಕೊಟ್ಟಿದ್ದರು. ಗವಿಸಿದ್ದಪ್ಪ, ವೀರನಗೌಡ, ಮಹಮ್ಮದ ರಫಿ, ಉಷಾ, ವಿಜಯಕುಮಾರವರ ಹೇಳಿಕೆ ಪಡೆದುಕೊಂಡೆನು ಆರೋಪಿ ನಿರಿಕ್ಷಣಾ ಜಾಮೀನು ಪಡೆದುಕೊಂಡು ಬಂದಿರುತ್ತಾನೆ, ದಸ್ತಗಿರಿ ನಿಯಮ ಪಾಲಿಸಿರುತ್ತೇನೆ. ಅನಂತರ ದೋಷರೊಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ: 24 ಃ ಪಿಡಬ್ಲೂ-09 ಃ ಜಂಬುನಾಥ್, ತಹಸಿಲ್ದಾರ್ ಸಾಃ ಹುಬ್ಬಳ್ಳಿ ಃ** ರವರು ತಮ್ಮ ಸಾಕ್ಷಿಯಲ್ಲಿ ಕೊಪ್ಪಳದ ಜಮೀನು ಸರ್ವೆ ನಂ.271/ಸಿ ಕ್ಷೇತ್ರ 4 ಎಕರೆ ಇದರ ಪಹಣಿ ದುರಸ್ಥಿಗಾಗಿ ದಿನಾಂಕಃ 18-09-2017 ರಂದು ತಮ್ಮ ಕಚೇರಿಯಲ್ಲಿ ಶರಣಪ್ಪ ತಂದೆ ಹನುಮಂತಪ್ಪ ಗಾಳಿ ನೀನು ಅರ್ಜಿ ಕೊಟ್ಟಿದ್ದು ಪೆಂಡಿಂಗ್ ಇತ್ತು. ಸದರಿ ಅರ್ಜಿಯ ಪ್ರಕಾರ ಅವರು ತಮ್ಮದು ಸರ್ವೆ ನಂ.271/1 ಕ್ಷೇತ್ರ 4 ಎಕರೆ ಇತ್ತು ತಿದ್ದುಪಡಿ ಕಾಲಕ್ಕೆ ಅದು ತಪ್ಪಾಗಿದೆ ಅದರ ಕ್ಷೇತ್ರ 2 ಎಕರೆ ಮಾಡಿಕೊಡಬೇಕು ಎಂದು ತಾನು ಗವಿಯಪ್ಪ ಮರಿಯಪ್ಪ ಗಾಳಿಯವರ ಮೊಮ್ಮಗ ಇದ್ದೇನೆ ಎಂದು ಅರ್ಜಿ ಕೊಟ್ಟಿರುತ್ತೀರಿ. ಆ ಕುರಿತು ಅವರು ದಾಖಲೆ ಪರಿಶೀಲನೆ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪಶ್ನೆ ಃ 25 ಃ** ಮುಂದುವರೆದು ಆಕಾರ್ ಬಂದ್ ಮತ್ತು ಪಹಣಿ ಪ್ರಕಾರ 2000-2001 ರಿಂದ 2021 ರವರೆಗೆ ಸರ್ವೆ ನಂ.271/ಸಿ ಹೊಸ ನಂ.271/1 ಕ್ಷೇತ್ರ 5 ಎಕರೆ ಪಿಕೆ 3 ಗುಂಟೆ ಇತ್ತು.

ಇವರು ಹೆಚ್ಚುವರಿಯಾಗಿ 2 ಎಕರೆ ಪಹಣಿಯಲ್ಲಿ ದಾಖಲಿಸಲು ಕೇಳಿರುತ್ತೀರಾ, ಆದರೆ ಅಲ್ಲಿ ಹೆಚ್ಚುವರಿಯಾಗಿ 2 ಎಕರೆ ಕ್ಷೇತ್ರ ಇರುವುದಿಲ್ಲಾ ಎಂದು ಹೇಳಿ ದಿನಾಂಕಃ14-01-2019 ರಂದು ಅರ್ಜಿದಾರರಿಗೆ ಹಿಂಬರಹ ಕೊಟ್ಟಿದ್ದಾರೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪಶ್ನೆ ಃ 26 ಃ** ಮುಂದುವರೆದು ನಂತರ ದಿನಾಂಕಃ 13-01-2020 ರಂದು ಶರಣಪ್ಪ ನಿನ್ನ ಪರವಾಗಿ ನಿನ್ನ ವಕೀಲರಾದ ಎಸ್.ಎ.ಶಮ್ಸ್ ವಕೀಲರು ಅವರಿಗೆ ಒಂದು ನೋಟೀಸ್ ಕೊಟ್ಟರು. ಅದರಲ್ಲಿ ತಮ್ಮ ಕಕ್ಷಿದಾರರಾದ ಶರಣಪ್ಪ ಗಾಳಿ ನಿನ್ನ ಹೆಸರನ್ನು 2 ಎಕರೆ ಜಮೀನಿಗೆ ದಾಖಲಿಸಬೇಕು ಎಂದು ಕೇಳಿದರು. ಈಗಾಗಲೇ ಅರ್ಜಿದಾರರಿಗೆ ಹಿಂಬರಹ ಕೊಟ್ಟಿದ್ದೇವೆ. ಅಲ್ಲಿ ಹೆಚ್ಚುವರಿ ಕ್ಷೇತ್ರ ಇಲ್ಲ ಎಂದು ದಿನಾಂಕಃ31-01-2020 ಅವರಿಗೆ ಉತ್ತರ ಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪಶ್ನೆ ಃ 27 ಃ** ಮುಂದುವರೆದು ಸರ್ವೆ ನಂ.271/1 ಕ್ಷೇತ್ರ 5 ಎಕರೆ ಪಿಕೆ 3 ಗುಂಟೆ, ಅದರಲ್ಲಿ ಮೂಲ ಮಾಲೀಕ ನರಸಪ್ಪ ತಂದೆ ವೆಂಕಪ್ಪ ಅಂತಾ 1973-1974 ರಿಂದ ಪ್ರಾರಂಭವಾಗುವ ಆರ್.ಟಿ.ಸಿಯಲ್ಲಿ ಇರುತ್ತದೆ. ಇಲ್ಲಿಯವರೆಗೂ ಅದೇ ಮುಂದುವರೆದಿರುತ್ತದೆ. ದೃಢಿಕೃತ ಪತ್ರವನ್ನು ಆರ್.ಟಿ.ಸಿ ಪ್ರತಿಯನ್ನು ಅವರ ಕಚೇರಿಯಿಂದ ಪಡೆದುಕೊಂಡು ಅದನ್ನು ತಿದ್ದಿ ನರಸಪ್ಪ ತಂದೆ ವೆಂಕಪ್ಪ ಇದ್ದ ಪಹಣಿ ಪತ್ರಿಕೆಯಲ್ಲಿ ವೆಂಕಪ್ಪ ಎಂಬ ಪದದ ಮುಂದೆ ಗಾಳಿ ಎಂಬ ಪದವನ್ನು ಸೇರಿಸಿ ನೋಟೀಸಿನೊಂದಿಗೆ ಕೊಟ್ಟಿರುತ್ತೀರಿ ಎಂದು ತಿಳಿಸಿರುತ್ತಾರೆ. ಗಾಳಿ ಎಂಬ ಶಬ್ದವನ್ನು ಖೊಟ್ಟಿಯಾಗಿ ನೀವೆ ಸೇರಿಸಿ ಈ ರೀತಿ ನೋಟೀಸ್ ಕೊಟ್ಟಿದ್ದೀರಿ ಎಂದು ಅವರ ಉತ್ತರದಲ್ಲಿ ಹೇಳಿದ್ದಾರೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪಶ್ನೆ ಃ 28 ಃ** ಮುಂದುವರೆದು ಈಗ ನ್ಯಾಯಾಲಯ ಮುಂದೆ ಹಾಜರಿರುವ ಆರೋಪಿ ನಿನ್ನ ಪರ ವಕೀಲರಾದ ಶ್ರೀ ಎಸ್.ಎ.ಎಸ್ ವಕೀಲರು ಅವರ ಕಚೇರಿಗೆ ಬಂದಿದ್ದರು, ಅವರು ಸ್ವತಃ ಅವರ

ಕಚೇರಿಯಲ್ಲಿ ಇರುವ ಒರಿಜಿನಲ್ ಆರ್.ಟಿ.ಸಿ ಪರಿಶೀಲನೆ ಮಾಡಿದರು. ತಾವು ಕೊಟ್ಟ ನೋಟೀಸ್ ಸರಿ ಇರುವುದಿಲ್ಲ ಮತ್ತು ನೋಟೀಸಿನೊಂದಿಗೆ ಗಾಳಿ ಎಂದು ಸೇರಿಸಿ ಬರೆದುಕೊಟ್ಟ ಆರ್.ಟಿ.ಸಿ ಪ್ರತಿ ಸಹ ಸರಿ ಇರುವುದಿಲ್ಲ ಅಂತಾ ಅವರೇ ಒಪ್ಪಿಕೊಂಡರು. ನಾನು ಕೊಟ್ಟ ನೋಟೀಸ್ ಮತ್ತು ತಾವು ಮೊದಲು ಕೊಟ್ಟಿದ್ದ ಆರ್.ಟಿ.ಸಿ ಪ್ರತಿ ಗೊಂದಲಕಾರಕ ಇವೆ, ಆ ವಿಷಯ ನನ್ನ ಗಮನಕ್ಕೆ ಬಂದಿರಲಿಲ್ಲ ಎಂದು ಹೇಳಿ ಅವರಿಗೆ ಲಿಖಿತವಾಗಿ ಬರೆದುಕೊಟ್ಟರು. ಅವರು ಕೊಟ್ಟ ಎರಡು ನೋಟೀಸುಗಳನ್ನು ಅವರು ಹಿಂಪಡೆದಿರುತ್ತೇನೆ ಎಂದು ತನಗೆ ಪತ್ರ ಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರಃ

**ಪಶ್ನೆ ಃ 29 ಃ** ಮುಂದುವರೆದು ವಕೀಲರು ಈ ರೀತಿ ಬರೆದುಕೊಟ್ಟ ನಂತರ ತಮ್ಮ ಕಚೇರಿಯ ಅಭಿಲೇಖಾಲಯ ಶಿರಸ್ತೇದಾರ ಇವರನ್ನು ಕರೆಯಿಸಿ ಶರಣಪ್ಪ ಗಾಳಿ ನೀನು ಅವರ ಕಚೇರಿಯಿಂದ ಪಹಣಿ ಪತ್ರಿಕೆಯ ದೃಢಿಕೃತ ನಕಲನ್ನು ನರಸಪ್ಪ ತಂದೆ ವೆಂಕಪ್ಪ ಇದ್ದುದ್ದನ್ನು ಪಡೆದುಕೊಂಡು, ಅದರಲ್ಲಿ ಗಾಳಿ ಎಂಬ ಪದವನ್ನು ನೀನೇ ಬರೆದುಕೊಂಡು ಖೊಟ್ಟೆ ದಾಖಲೆ ಸೃಷ್ಟಿ ಮಾಡಿದ್ದಾರೆ ಎಂದು ಹೇಳಿ ಮೊಕದ್ದಮೆ ದಾಖಲಿಸಬೇಕು ಎಂದು ಲಿಖಿತವಾಗಿ ದಿನಾಂಕಃ 25-02-2020 ರಂದು ಕಚೇರಿ ಆದೇಶ ಮಾಡಿದರು. ಆ ಪ್ರಕಾರ ಅವರು ಶರಣಪ್ಪ ಹನುಮಂತಪ್ಪ ಗಾಳಿ ನಿನ್ನ ಮೇಲೆ ಫಿರ್ಯಾದಿ ಕೊಟ್ಟಿದ್ದಾರೆ. ಮೂಲ ಮಾಲೀಕ ನರಸಪ್ಪ ತಂದೆ ವೆಂಕಪ್ಪ ಇವರ ಅಡ್ಡ ಹೆಸರು ಕರಮುಡಿ ಎಂದು ಹಳೆಯ ಪಹಣಿ ಪತ್ರಿಕೆಯಲ್ಲಿ 1963-1964 ರಿಂದ 1966-1967 ರವರೆಗೆ ಇರುತ್ತದೆ. ಅದು ಮುಂದುವರೆದ ವರ್ಷಗಳಲ್ಲಿ ಅವರ ಕಚೇರಿಯವರು ನರಸಪ್ಪ ತಂದೆ ವೆಂಕಪ್ಪ ಮಾತ್ರ ಬರೆಯುತ್ತಾ ಬಂದಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ**?**

ಆರೋಪಿಯ ಉತ್ತರಃ

**ಪಶ್ನೆ ಃ 30 ಃ** ಮುಂದುವರೆದು ಸದರಿ ಶರಣಪ್ಪ ಹನುಮಂತಪ್ಪ ಗಾಳಿ ನೀನು ನರಸಪ್ಪ ತಂದೆ ವೆಂಕಪ್ಪ ಕರಮುಡಿ ಇವರಿಗೆ ಸಂಬಂಧ ಅಂತಾ ತೋರಿಸಿಲ್ಲ. ಇದೇ ಜಮೀನಿನಲ್ಲಿ ಡಿ.ಸಿ.ಆಫೀಸ್ ಕಟ್ಟಿರುತ್ತಾರೆ. ನರಸಪ್ಪ ತಂದೆ ವೆಂಕಪ್ಪ ಕರಮುಡಿ ಇವರ ವಾರಸುದಾರರು ಎಲ್ಲಿ ಇದ್ದಾರೆ ಅಂತಾ

ಗೊತ್ತಿಲ್ಲ. ಅವರು ಪರಿಹಾರದ ಹಣ ಸಹ ಪಡೆದಿಲ್ಲ ಎಂದು ಕೇಳಿ ಗೊತ್ತಾಗಿದೆ ಆದರೆ ದಾಖಲೆ ನೋಡಿಲ್ಲ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪಶ್ನೆ ಃ 31 ಃ** ಮುಂದುವರೆದು ಸರ್ವೆ ನಂ.226/ಬಿ ಇದರ 1957-1958 ರಿಂದ 1977-1978 ನೇ ಸಾಲಿನ ಪಹಣಿ ಪತ್ರಿಕೆಗಳ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳ ಮೇಲೆ ನರಸಪ್ಪ ತಂದೆ ವೆಂಕಪ್ಪ ಎಂದು ಇರುತ್ತದೆ. ಸರ್ವೆ ನಂ.271/1 ಇದರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು 1973-1974 ರಿಂದ 1977-1978 ರವರೆಗೆ ನರಸಪ್ಪ ತಂದೆ ವೆಂಕಪ್ಪ ಅಂತಾ ದಾಖಲು ಇರುತ್ತದೆ. ಸರ್ವೆ ನಂ.271/1 ಇದರ 1973-1974 ರಿಂದ 2000-2001 ನೇ ಸಾಲಿನ ಪಹಣಿ ಪತ್ರಿಕೆ ಹಾಜರುಪಡಿಸಿದ್ದು ಅದು 1973-1974 ರಲ್ಲಿ ನರಸಪ್ಪ ಗಾಳಿ ಅಂತಾ ಇದ್ದು ಅದು 2000-2001 ರವರೆಗೆ ಮುಂದುವರೆದಿರುತ್ತದೆ. ಸದರಿ ಶರಣಪ್ಪ ಹನುಮಂತಪ್ಪ ಗಾಳಿ ನೀನು ಅವರು ಕೊಟ್ಟ ಹಿಂಬರಹವನ್ನು ಮತ್ತು ಅವರು ಕೊಟ್ಟ ವಿವಾದಿತ ಜಮೀನಿನ ಪಹಣಿ ಪತ್ರಿಕೆಯನ್ನು ತೆಗೆದುಕೊಂಡು ಹೋಗಿ ನೀನು ಎಸ್.ಎ.ಶಮ್ಸ್ ವಕೀಲರನ್ನು ಭೇಟಿಯಾಗಿದ್ದೆ, ಅವರು ತಾವು ಕೊಟ್ಟ ಪಹಣಿ ಪತ್ರಿಕೆಯ ನಕಲಿನಲ್ಲಿ ನರಸಪ್ಪ ತಂದೆ ವೆಂಕಪ್ಪ ಎಂದು ಬರೆದಿದ್ದರ ಮುಂದೆ ಗಾಳಿ ಎಂದು ಎಸ್.ಎ.ಶಮ್ಸ್ ವಕೀಲರೆ ಬರೆದಿದ್ದಾರೆ ಎಂದು ಹೇಳಿ ಅವರಿಗೆ ಲಿಖಿತವಾಗಿ ಬರೆದುಕೊಟ್ಟಿರುತ್ತೀಯಾ ಎಂದು ಹೇಳಿ ಆ ರೀತಿ ಬರೆದುಕೊಟ್ಟಿದ್ದನ್ನು ತನಿಖಾ ಕಾಲಕ್ಕೆ ಪೋಲೀಸ್ ಠಾಣೆಗೆ ಕಳುಹಿಸಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ ಮತ್ತು ಅದರ ಜಿರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆಃ 32 ಃ** ನಿಮಗೆ ಬೇರೆ ಏನಾದರೂ ಹೇಳುವುದು ಇದಯೊ?

ಆರೋಪಿಯ ಉತ್ತರಃ

**ಪ್ರಶ್ನೆಃ 33 ಃ- ನಿಮ್ಮ ಪರವಾಗಿ ಸಾಕ್ಷಿ ಮಾಡಿಸುವಿರಾ?**

ಆರೋಪಿಯ ಉತ್ತರಃ

**(**ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ**,** ತಿಳಿಸಲಾಯಿತು**.** ಅವರು ಕೊಟ್ಟ ಉತ್ತರ ಬರೆದುಕೊಳ್ಳಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ**.)**

ಸ್ಥಳಃ ಕೊಪ್ಪಳ.
ದಿನಾಂಕಃ 03-06-2026

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಕೊಪ್ಪಳ.**